ಎಂವಿಸಿ 394/2022

ಪಿ.ಡಬ್ಲ್ಯು 1

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ದಿನಾಂಕ: 09-06-2023

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ:** ಅರ್ಜಿದಾರರ ಪರ ಶ್ರೀ ಜಿ.ಎಂ.ಎಂ. ವಕೀಲರಿಂದ,

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿದ್ದೇನೆ.

ಈ ಕೇಸಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ದೃಢಿಕೃತ ಪ್ರ.ವ. ವರದಿ, ಪಿರ್ಯಾದಿ ನಕಲು, ಘಟನಾ ಸ್ಥಳದ ಪಂಚನಾಮೆ ವರದಿ ಪ್ರತಿ, ವಾಹನ ಪಂಚನಾಮೆ ಪ್ರತಿ, 2 ಐ.ಎಂ.ವಿ ರಿಪೋರ್ಟ್, ಗಾಯದ ಪ್ರಮಾಣ ಪತ್ರ, ಅಂತಿಮ ವರದಿಯ ನಕಲು, ಇವುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ-1 ರಿಂದ ನಿಪಿ-8 ಎಂದು ಗುರುತಿಸಲಾಯಿತು. 2 ಡಿಸ್ಚಾರ್ಜ್ ಸಮ್ಮರಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು 2 ನೇ ಎದ್ರುದಾರ ಪರ ವಕೀಲರು ಗುರುತಿಸಲು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-9 ಮತ್ತು 10 ಎಂದು ಗುರುತಿಸಲಾಯಿತು. ಅಂಗನ್ಯೂನ್ಯತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಗುರುತಿಸಲು ಎದ್ರುದಾರರ ಪರ ವಕೀಲರು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-11 ಎಂದು ಗುರುತಿಸಲಾಯಿತು. ಒಟ್ಟು 29 ಮೆಡಿಕಲ್ ಹಾಗೂ ಇತರೆ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಸದರಿ ರಶೀದಿಗಳಲ್ಲಿ 3 ರಶೀದಿಗಳು ಗುರುತಿಸಲು 2 ನೇ ಎದ್ರುದಾರ ಪರ ವಕೀಲರು ಗುರುತಿಸಲು ತಕರಾರು ಮಾಡಿದ್ದು, ಆದ್ದರಿಂದ ಅದನ್ನು ಸಾಬೀತುಪಡಿಸುವ ತಕರಾರಿಗೆ ಒಳಪಟ್ಟು ನಿಪಿ-12 ಮತ್ತು 14 ಎಂದು ಗುರುತಿಸಲಾಯಿತು. ಇನ್ನುಳಿದ ರಶೀದಿಗಳನ್ನು ಕ್ರಮವಾಗಿ ನಿಪಿ-15 ರಿಂದ ~~37~~ 40 ಎಂದು ಗುರುತಿಸಲಾಯಿತು. 2 ಔಷಧಿ ರಶೀದಿಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ- ~~38~~ 41 ಮತ್ತು ~~39~~ 42 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿಕೊಂಡಂತೆ ಪರಿಹಾರ ಕೊಡಿಸಬೇಕಾಗಿ ವಿನಂತಿ.

9/6/23

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಂ.ಬಿ. ವಕೀಲರಿಂದ.**

ನಾನು ಸದರಿ ದಿನ ಕುಳಿತುಕೊಂಡು ಹೋಗುತ್ತಿದ್ದ ನನ್ನ ಅಣ್ಣ ಹಸನ್ ನಿಗೆ ಸೇರಿದ್ದಾಗಿತ್ತು. ಸದರಿ ದಿನ ನಾವು ವಾಹನದಲ್ಲಿ 3 ಜನರು ಅಂದರೆ ನಾನು ನನ್ನ ಅಣ್ಣ, ನನ್ನ ಅತ್ತಿಗೆ ಹೋಗುತ್ತಿದ್ದೆವು. ನನ್ನ ಅತ್ತಿಗೆ ವಾಹನದ ಮಧ್ಯದಲ್ಲಿ ನಾನು ಹಿಂದುಗಡೆ ಕುಳಿತಿದ್ದೆನು. ಸದರಿ ವಾಹನಕ್ಕೆ ಯಾವ ಸಂಸ್ಥೆಯ ವಿಮೆ ಇತ್ತು ಎಂದು ಗೊತ್ತಿಲ್ಲ. ನಾನು 12 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಒಂದು ವಾಹನದಲ್ಲಿ 3 ಜನರು ಹೋಗಲು ಕಾನೂನಿನಲ್ಲಿ ಅವಕಾಶ ಇಲ್ಲ ಎಂದರೆ ಸರಿ. ಅಪಘಾತವಾದ ತಕ್ಷಣ ಭಟ್ಕಳದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತವಾದಾಗ ನನಗೆ ಪ್ರಜ್ಞೆ ಇರಲಿಲ್ಲ. ಭಟ್ಕಳದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ನನಗೆ ಪ್ರಜ್ಞೆ ಬಂದಿತ್ತು. ಆಸ್ಪತ್ರೆಯಲ್ಲಿ ನನ್ನೊಂದಿಗೆ ನನ್ನ ಅಣ್ಣ, ಅತ್ತಿಗೆ ಮತ್ತು ನನ್ನ ತಂದೆ ಇದ್ದರು. ಭಟ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ನನಗೆ ಹೇಳಲು ಬರುವುದಿಲ್ಲ. ಅಲ್ಲಿ ನಾನು ಸುಮಾರು ಅರ್ಧ ಗಂಟೆ ಚಿಕಿತ್ಸೆ ಪಡೆದಿರುತ್ತೇನೆ. ಆಸ್ಪತ್ರೆಗೆ ಪೋಲಿಸರು ಬಂದಿರಲಿಲ್ಲ. ಅಲ್ಲಿಂದ ನನ್ನನ್ನು ಭಟ್ಕಳದ ಜಾಲಿ ರಸ್ತೆಯಲ್ಲಿರುವ ಲೈಫ್ ಕೇರ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆಗ ನನಗೆ ಪ್ರಜ್ಞೆ ಇತ್ತು. ಅಲ್ಲಿ ಚಿಕಿತ್ಸೆ ಕೊಟ್ಟ ವೈದ್ಯರ ಹೆಸರು ನನಗೆ ಗೊತ್ತಿಲ್ಲ. ಆಸ್ಪತ್ರೆಯವರು ಗಾಯ ಹೇಗೆ ಆಗಿದೆ ಎಂದು ನನ್ನನ್ನು ವಿಚಾರಿಸಿರುತ್ತಾರೆ. ಆಗ ನಾನು ರಸ್ತೆ ಅಪಘಾತವಾಗಿರುವುದು ಹೇಳಿರುತ್ತೇನೆ. ಅಲ್ಲಿಂದ ಉಡುಪಿಯ ಆದರ್ಶ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಲೆಫ್ ಕೇರ್ ಆಸ್ಪತ್ರೆಯಲ್ಲಿರುವಾಗ ಪೋಲಿಸರು ಬಂದಿರಲಿಲ್ಲ. ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿ ಡಾ.ಮೋಹನದಾಸ ಎನ್ನುವವರು ನನಗೆ ಚಿಕಿತ್ಸೆ ಕೊಟ್ಟಿರುತ್ತಾರೆ. ಲೈಫ್ ಕೇರ್ ಆಸ್ಪತ್ರೆಯಲ್ಲಿ ನನ್ನೊಂದಿಗೆ ನನ್ನ ತಂದೆ, ತಾಯಿ, ಅಣ್ಣ ಮತ್ತು ಅತ್ತಿಗೆ ಇದ್ದರು. ಉಡುಪಿಯ ಆದರ್ಶ ಆಸ್ಪತ್ರೆಯಲ್ಲಿರುವಾಗ ಪೋಲಿಸರು ಬಂದಿರಲಿಲ್ಲ. ಅಪಘಾತವಾದ ತಕ್ಷಣ ಪೋಲಿಸರಿಗೆ ವಿಷಯ ತಿಳಿಸಬೇಕಾಗುತ್ತದೆ ಎಂದು ಸಾಮಾನ್ಯ ಜ್ಞಾನ ನನಗೆ ಇದೆ. ಅಪಘಾತವು ನಾವು ಹೋಗುತ್ತಿದ್ದ ನಮ್ಮ ವಾಹನದ ಹಿಂದುಗಡೆಗೆ ಕಾರು ಬಂದು ಢಿಕ್ಕಿಪಡಿಸಿರುತ್ತದೆ. ಅಪಘಾತವಾದಾಗ ನಮ್ಮ ವಾಹನ ಮತ್ತು ಕಾರಿಗೆ ಹಾನಿಯಾದ ಬಗ್ಗೆ ನಾನು ನೋಡಿರಲಿಲ್ಲ, ಆದರೆ ನಾವು ಮೂರು ಜನರಿಗೂ ಪೆಟ್ಟಾಗಿತ್ತು. ನನ್ನ ಅಣ್ಣ ಭಟ್ಕಳದ ಲೈಫ್ ಕೇರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಅಪಘಾತವು ರಾ.ಹೆ. ಮೇಲೆ ಆಗಿರುವುದಿಲ್ಲ. ಆದರೆ ಅದು ಮುಂಡಳ್ಳಿಯ ಸಮುದ್ರ ತೀರದ ರಸ್ತೆಯಲ್ಲಿ ಆಗಿರುತ್ತದೆ. ಅಪಘಾತವು

ಟಾರು ರಸ್ತೆಯ ಮೇಲೆ ಆಗಿರುತ್ತದೆ. ಸದರಿ ರಸ್ತೆ 20-25 ಅಡಿ ಅಗಲ ಇದೆ. ಮತ್ತು 2 ಬದಿಗೆ ಕಚ್ಚಾ ರಸ್ತೆ ಇದೆ ಎಂದರೆ ನಾನು ನೋಡಿರುವುದಿಲ್ಲ. ಹಿಂದುಗಡೆಯಿಂದ ಬರುತ್ತಿದ್ದ ಕಾರಿಗೆ ನೋಂದಣಿ ಸಂಖ್ಯೆ ಇರಲಿಲ್ಲ ಎಂದರೆ ನಾನು ನೋಡಿರುವುದಿಲ್ಲ. ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಪಿರ್ಯಾದಿ ಕೊಡುವಾಗ ಕಾರಿನ ನಂಬರು ಹೇಳಿರುವುದಿಲ್ಲ, ಏಕೆಂದರೆ ಆಗ ಸದರಿ ಕಾರಿಗೆ ನಂಬರು ಇದ್ದಿರುವುದಿಲ್ಲ. ಅಪಘಾತವು ನನ್ನ ಅಣ್ಣ ಒಂದೇ ವಾಹನದಲ್ಲಿ 3 ಜನರನ್ನು ಕುಳಿಸಿಕೊಂಡು ವೇಗವಾಗಿ ಮತ್ತು ನಿಶ್ಕಾಳಜಿತನದಿಂದ ವಾಹನ ಚಲಾಯಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಕಾರು ನಮ್ಮ ವಾಹನಕ್ಕೆ ಢಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನನ್ನ ಅಣ್ಣ ಕಾರು ಚಾಲಕನ ವಿರುದ್ಧ ತಡವಾಗಿ ದೂರು ಸಲ್ಲಿಸಿದ್ದಾನೆ ಎಂದರೆ ಸರಿಯಲ್ಲ. ನಮ್ಮ ವಾಹನಕ್ಕೆ ವಿಮೆ ಇರಲಿಲ್ಲ ಮತ್ತು ನನ್ನ ಅಣ್ಣನಿಗೆ ವಾಹನ ಚಲಾವಣೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹೇಳಿದಂತೆ ವೈದ್ಯಕೀಯ ವೆಚ್ಚ ಮತ್ತು ವಾಹನ ಬಾಡಿಗೆ ವೆಚ್ಚ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಒಳರೋಗಿಯಾಗಿ ಮತ್ತು ಹೊರರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ ಮತ್ತು ವೈದ್ಯರ ಮೇಲೆ ಪ್ರಭಾವ ಬೀರಿ ನಿಪಿ-11 ನ್ನು ಪಡೆದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಟೈಲರಿಂಗ್ ಕೆಲಸ ಕಲಿತ ಬಗ್ಗೆ ಪ್ರಮಾಣ ಪತ್ರ ಇರುತ್ತದೆ. ರೂ.25,000/- ಆದಾಯ ಬರುತ್ತಿತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ನಿಖರವಾದ ದಾಖಲೆ ಇರುವುದಿಲ್ಲ. ನಾನು ಟೈಲರಿಂಗ್ ಕೆಲಸ ಮಾಡುತ್ತಿರಲಿಲ್ಲ, ನಾನು ಹೇಳಿದಷ್ಟು ಆದಾಯ ಬರುತ್ತಿರಲಿಲ್ಲ, ನನಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಕಾರಿನ ಚಾಲಕನಿಗೆ ವಾಹನ ಚಾಲನಾ ಪತ್ರ ಇರಲಿಲ್ಲ, ಸದರಿ ಕಾರಿಗೆ ಫಿಟ್ನೆಸ್ ಪ್ರಮಾಣ ಪತ್ರ, ನೋಂದಣಿ ಸಂಖ್ಯೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ 2 ನೇ ಎದ್ರುದಾರ ನಾನು ಹೇಳಿದಂತೆ ಪರಿಹಾರ ಕೊಡಲು ಬಾಧ್ಯಸ್ಥನಾಗುವುದಿಲ್ಲ ಎಂದರೆ ಸರಿಯಲ್ಲ.

(1 ನೇ ಎದ್ರುದಾರ ಎಕ್ಸಪಾರ್ಟೆ ಆಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಮೆಂಬರ್ ಎಡಿಶನಲ್ ಎಂಎಸಿಟಿ ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ**